

# ಪದೇ ಪದೇ ಆದೇ ಆದೇ

## 1. ಮೀಸೆಜ್ಜ

ರಾತ್ರಿ ಎರಡು ಗಂಟೆ. ಸಂಜೆಯಷ್ಟೇ ನಾವು ಮಣ್ಣು ಮಾಡಿದ್ದ ಮೀಸೆಜ್ಜ, ಮಲಗಿದ್ದ ನನ್ನನ್ನು ಎಬ್ಬಿಸಿ ಈಗ ಎದುರು ನಿಂತಿದ್ದ! "ಅಜ್ಜ ನಿನ್ನ ಕೇಳಾಕತ್ತಾನ" ಎಂದು ಚಿಕ್ಕಪ್ಪನೆಂದಾಗ ಲಂಡನ್ನಿನಿಂದ ಬಂದಿದ್ದ ನಾನು ಮನೆ ಮುಟ್ಟುವಷ್ಟರಲ್ಲಿ ಅಜ್ಜ ತೀರಿಕೊಂಡಿದ್ದ. ನಾನು ಸಣ್ಣವನಿದ್ದಾಗ, "ಅಜ್ಜ ಮೀಸೆ... ಮೀಸೆ ಅಜ್ಜ..." ಎನ್ನುತ್ತಾ ತುದಿಗಳನ್ನು ಮೇಲೆ ತಿರುವಿಕೊಂಡಿರುತ್ತಿದ್ದ ಅವನ ಮೀಸೆಯನ್ನು ಇನ್ನೂ ತಿರುವುತ್ತಿದ್ದೆ. ಹಾಗೆ ಅಜ್ಜ ಮೀಸೆಜ್ಜನಾಗಿದ್ದ. ಸತ್ತ ಮೇಲೆ ಅಜ್ಜನ ವಯಸ್ಸು ಇಳಿದಂತಿದೆ. ಪೊದೆ ಮೀಸೆ ಯಾವಾಗಲೂ ತಿರುವಿರುವಂತೆಯೇ ತಿರುವಿಕೊಂಡಿತ್ತಾದರೂ ಸಾಯುವಾಗ ಇದ್ದಂತೆ ಬಿಳುಪಾಗಿಲ್ಲ. ಅವನು ಮೀಸೆಜ್ಜನಲ್ಲವೆಂದು ಅನುಮಾನ ಶುರುವಾಯಿತು. ಆದರೆ ತಾನು ಸಣ್ಣವನಿದ್ದಾಗ ತನ್ನವ್ವ ಹಾಕಿಸಿದ್ದು ಎಂದು ಅವನು ಹೇಳುತ್ತಿದ್ದ ಆಂಜನೇಯನ ಹಚ್ಚೆ ಅವನ ಬಲಗೈಯಲ್ಲಿತ್ತು. ನಾನು ಎದ್ದು ಅವನತ್ತ ಹೋಗುತ್ತಲೇ ಅಳಲತ್ತಿದ. ಅವನ ಅಳು ಕಂಡು, ಅವನು ನನ್ನ ಅಜ್ಜನೇ ಎಂಬುದು ಇನ್ನೂ ಖಾತ್ರಿಯಾಗಿ ನಾನೂ ಅಳಲತ್ತಿದೆ. ಮೀಸೆಜ್ಜ ಸತ್ತಿದ್ದು, ನಾವು ಮಣ್ಣು ಮಾಡಿ ಬಂದಿದ್ದೆಲ್ಲಾ ಕನಸು ಎಂದುಕೊಂಡು, ಮೀಸೆಜ್ಜ ನನ್ನನ್ನು ಬಾಯ್ತುಂಬಾ 'ಇಂಜಿನೇರು' ಎನ್ನಲಿ ಎಂದು ಜೀವ ಕಾಯಲತ್ತಿತು. ಅವನು, "ನಿಮ್ಮಜ್ಜ ಭಾಳ ಪರಿಚಯ ನನೀಗೆ. ಸಂತ್ಯಾಗ ಸಿಕ್ಕಾಗೆಲ್ಲಾ ದ್ವಾಸಿ ಕೊಡುಸ್ತಿದ್ದ." ಎಂದು ಅಳುವನ್ನು ಜೋರು ಮಾಡಿದ.

ಸತ್ತ ನಂತರ ಅಜ್ಜನೇ ಬಂದು ತಾನು ಬೇರೆ ಯಾರೋ ಎಂದು ಹೇಳಿಕೊಳ್ಳುವುದೆಂದರೇನು? ಮೀಸೆಜ್ಜ ಯಾಕೆ ಸುಳ್ಳು ಹೇಳುತ್ತಿದ್ದಾನೆ? ಗೊತ್ತಾಗುವುದೇ ಇಲ್ಲ, ಎಚ್ಚರವಾಗಿ ಬಿಡುತ್ತೇನೆ.

## 2. ಹೋಮ್‌ವರ್ಕ್

ಕುಕ್ಕರ್ ಇಟ್ಟು ಬಂದು, ನಾನು ಹುಟ್ಟಿ ಹತ್ತು ವರ್ಷ